O.S. 80/2016 Further Cross of PW 2

ದಿನಾಂಕ 26-02-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು :** ಪ್ರತಿವಾದಿಗಳ ಪರ ಶ್ರೀ ಎ ವಿ ಎಸ್ ವಕೀಲರಿಂದ.

ನಾನು ಎಲ್ಲಾ ಹಿಸ್ಸೆದಾರರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎನ್ನುತ್ತಾರೆ. ಈ ದಾವೆಯನ್ನು ಪುನರ್ ವಿಚಾರಣೆಗಾಗಿ ಕಳುಹಿಸುವ ಮೊದಲು ಪ್ರತಿವಾದಿ ರವರು ವಂಶವೃಕ್ಷದಲ್ಲಿ ಜನಾಬಾಯಿ ರವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂಬ ವಾದವನ್ನು ತೆಗೆದುಕೊಂಡಿದ್ದರು ಎಂದರೆ ಸಾಕ್ಷಿ ಜನಾಬಾಯಿ ರವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಸೇರಿಸಿದ್ದೇನೆ ಎನ್ನುತ್ತಾರೆ. ತಿದ್ದುಪಡಿ ವಾದ ಪತ್ರದಲ್ಲಿ ಜನಾಬಾಯಿ ರವರ ಮಗಳು ಉಮಾಬಾಯಿ ರವರನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ತುಳಸಾಬಾಯಿ ರವರ ವಾರಸುದಾರರು ಅನುಸುಯಾ ಮತ್ತು ವಿಮಲಾ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಗುಲಾಬಿ ರವರ ಗಂಡ ರಾಮಚಂದ್ರ ಆಗಿದ್ದು, ಅವರನ್ನು ತುಳಸಾಬಾಯಿ ರವರ ಗಂಡ ಎಂದು ತೋರಿಸಿದ್ದೀರಿ ಎಂದರೆ ಸರಿ, ಸಾಕ್ಷಿ ಮುಂದುವರೆದು ತಪ್ಪಾಗಿದೆಯೋ ನನಗೆ ಗೊತ್ತಿಲ್ಲ. ಬಹಳ ದಿನಗಳಿಂದ ಪ್ರತಿವಾದಿಯರೇ ದಾವಾ ಆಸ್ತಿಯ ಕಬ್ಜೆಯಲ್ಲಿದ್ದು ನೀವು ಯಾವತ್ತು ದಾವಾ ಆಸ್ತಿಯ ಕಬ್ಜೆಯಲ್ಲಿ ಇಲ್ಲದಿದ್ದರೂ ಸಹ ದಾವಾ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿದ್ದೀರಿ ಎಂದರೆ ಸರಿಯಲ್ಲ. ಗುಲಾಬಿ ರವರ ಮಗಳು ಜಾನಕಿ ರವರನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸಾಕ್ಷ ನಾವು ವಾರಸುದಾರರನ್ನು ಸೇರಿಸಲು ಕ್ರಮ ಕೈಗೊಂಡಿದ್ದೇವೆ ತಪ್ಪಾಗಿದೆಯೋ ನನಗೆ ಗೊತ್ತಿಲ್ಲ. ಎಲ್ಲಾ ಪಕ್ಷಗಾರರನ್ನು ಸೇರಿಸದ ಕಾರಣ ಈ ದಾವೆಯನ್ನು ಪುನರ್ ವಿಚಾರಣೆಗಾಗಿ ಕಳುಹಿಸಿದ್ದು, ಆದರೂ ಸಹ ನೀವು ಎಲ್ಲಾ ಪಕ್ಷಗಾರರನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ.

O.S. 80/2016 Further Cross of PW 2

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.